**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯ, ದೇವದುರ್ಗ.**

**CC No.627/2023**

**Pw-2 Cw-2**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ವೆಂಕಟೇಶ ಪಾಟೀಲ್ ತಂದೆ ಚನ್ನಪ್ಪಗೌಡ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ಒಕ್ಕಲುತನ |
| ವಾಸಸ್ಥಳ | ಃ | ಕಾಕರಗಲ್ |
| ಪ್ರಮಾಣಿಕರಿಸಿದ ದಿನಾಂಕ | ಃ | 20-03-2025 |

---

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ.**

ದಿನಾಂಕ 18-09-2016 ರಂದು ಮಧ್ಯಾಹ್ನ 1-00 ಗಂಟೆಯ ಸುಮಾರಿಗೆ ಮುಷ್ಟೂರು ಕ್ರಾಸ್ ಬಳಿ ರಮೇಶ ಇವರಿಗೆ ಸೇರಿದ ಕುರಿಗಳ ಕಳ್ಳತನವಾಗಿರುವ ಸ್ಥಳದಲ್ಲಿ ಗಬ್ಬೂರು ಪೊಲೀಸರು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ನಮ್ಮ ಸಹಿ ಪಡೆದಿರುತ್ತಾರೆ. ಪಂಚನಾಮೆಯ ಮೇಲಿರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ.ಡಿ.ಸಿ ವಕೀಲರಿಂದ.**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಘಟನಾ ಸ್ಥಳದಿಂದ ನಮ್ಮ ಗ್ರಾಮ ಅಂದಾಜು ಒಂದುವರೆ ಕಿಲೋಮೀಟರ್ ಅಂತರದಲ್ಲಿದೆ. ರಮೇಶನ ಊರು ಮಲ್ಲಾಪುರ ಆಗಿರುತ್ತದೆ. ಸದರಿ ರಮೇಶ ಮುಷ್ಟೂರು ಕ್ರಾಸ್‌ನಲ್ಲಿ ಶೆಡ್ಡು ಹಾಕಿಕೊಂಡು ವಾಸವಿರುತ್ತಾರೆ. ಸದರಿ ರಮೇಶ ಕುರಿ ಕಳ್ಳತನವಾಗುವ ಪೂರ್ವದಲ್ಲಿ 3-4 ವರ್ಷದಿಂದ ಅಲ್ಲಿ ವಾಸವಿದ್ದ. ಸದರಿ ರಮೇಶನು ಕುರಿ ಮೇಯಿಸುವುದರೊಂದಿಗೆ ಜಮೀನುಗಳನ್ನು ಲೀಜ್‌ಗೆ ಮಾಡುತ್ತಾನೆ. ರಮೇಶ ಲೀಜ್‌ಗೆ ಪಡೆದ ಜಮೀನಿಗೆ ಹೊಂದಿಕೊಂಡಂತೆ ನನ್ನ ಮಾವನಿಗೆ ಸೇರಿದ ಜಮೀನು ಇರುತ್ತದೆ. ಪೊಲೀಸರು ನನ್ನನ್ನು ಕಾಕರಗಲ್‌ನಿಂದ ಪೋನ್ ಮೂಲಕ ಕರೆಯಿಸಿಕೊಂಡಿರುತ್ತಾರೆ. ಸ್ಥಳದಲ್ಲಿ ನಾನು, ಹನುಮಂತ್ರಾಯ ಮತ್ತು 03 ಜನ ಪೊಲೀಸರು ಹಾಗೂ ಜನ ಇದ್ದರು ಅವರ ಹೆಸರು ಹೇಳಲು ಬರುವುದಿಲ್ಲ. ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು 12-30 ರಿಂದ ಅಂದಾಜು 1-30 - 2-00 ಗಂಟೆಯವರೆಗೆ ಮಾಡಿರುತ್ತಾರೆ. ನನ್ನ ಸಮಕ್ಷಮ ಪಂಚನಾಮೆ ಬರೆದು ಸಹಿ ಪಡೆದಿರುತ್ತಾರೆ. ಪಂಚನಾಮೆಯಲ್ಲಿ ಬರೆದ ವಿಷಯಗಳನ್ನು ಓದಿ ತಿಳಿದುಕೊಂಡ ನಂತರ ಸಹಿ ಮಾಡಿರುತ್ತೇನೆ. ಪಂಚನಾಮೆ ಮಾಡಿದ ಜಮೀನಿನ ಸರ್ವೆ ನಂಬರ ನನಗೆ ನೆನಪಿರುವುದಿಲ್ಲ. ಸದರಿ ಶೆಡ್ಡು ಗುಡಿಸಲು ತರಹ ಹಾಕಲಾಗಿತ್ತು.

ಕುರಿಗಳ ತಂತಿ ಬೇಲಿಯನ್ನು ಕಿತ್ತಿದ್ದರು. ಘಟನಾ ಸ್ಥಳದಲ್ಲಿ ಫೋಟೋ ತೆಗೆದ ಬಗ್ಗೆ ನೆನಪಿರುವುದಿಲ್ಲ. ಮುಷ್ಟೂರು ಗ್ರಾಮಕ್ಕೆ ಹೋಗುವ ರಸ್ತೆಯ ಉತ್ತರ ಭಾಗಕ್ಕೆ ಶೆಡ್ಡು ಇರುತ್ತದೆ. ಸದರಿ ಶೆಡ್ಡಿನ ಪೂರ್ವ ಭಾಗಕ್ಕೆ ಖಾಲಿ ಜಾಗ ಬರುತ್ತದೆ, ಪಶ್ಚಿಮಕ್ಕೆ ಖಾಲಿ ಜಾಗ ಇರುತ್ತದೆ, ಉತ್ತರಕ್ಕೆ - ರಸ್ತೆ ಇರುತ್ತದೆ ಮತ್ತು ದಕ್ಷಿಣಕ್ಕೆ ಕೆನಾಲ್ ಬರುತ್ತದೆ. ಸದರಿ ಕಾಕರಗಲ್ ಗ್ರಾಮದಲ್ಲಿ ಸಾಮಾಜಿಕ ಸೇವೆ ಮಾಡುತ್ತೇನೆ ಎಂದರೆ ಸರಿ. ಸಾಮಾನ್ಯವಾಗಿ ಠಾಣೆಗೆ ಹೋಗಿ-ಬಂದು ಮಾಡುತ್ತೇನೆ ಎಂದರೆ ಕೆಲಸವಿದ್ದಾಗ ಹೋಗಿ ಬಂದು ಮಾಡುತ್ತೇನೆ ಎಂದು ನುಡಿಯುತ್ತಾರೆ.

ದಿನಾಂಕ 18-09-2016 ರಂದು ಮಧ್ಯಾಹ್ನ 12-00 ರಿಂದ 1-30 ರ ಅವಧಿಯಲ್ಲಿ ಮುಷ್ಟೂರು ಕ್ರಾಸ್ ಬಳಿ ರಮೇಶ ಇವರಿಗೆ ಸೇರಿದ ಕುರಿಗಳ ಕಳ್ಳತನದ ಸ್ಥಳದಲ್ಲಿ ಪೊಲೀಸರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ನನ್ನ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರಮೇಶ ನನಗೆ ಪರಿಚಯ ಇರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.